C

ಕರ್ನಾಟಕ ಸರ್ಕಾರ
ಕರ್ನಾಟಕ ವಿಧಾನ ಪರಿಷತ್ತು
12ನೇ ಅಧಿವೇಶನ-2022

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1951 (2258)
ಮಾನ್ಯ ಸದಸ್ಯರ ಹೆಸರು	:	ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ಸಚಿವರು	:	ಮಾನ್ಯ ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	21.03.2022

ಕ್ರಮ. ಸಂಖ್ಯೆ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ವಿಶ್ವವಿದ್ಯಾಲಯ ಸ್ಥಾಪನೆ ಯಾಗಿದ್ದು ಯಾವಾಗ; (ಅದರ ಧ್ಯೇಯೋದ್ದೇಶಗಳೇನು)	ಬೆಂಗಳೂರು ವಿಶ್ವವಿದ್ಯಾಲಯವನ್ನು 1964ರಲ್ಲಿ ಸ್ಥಾಪಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವು ಕೆಳಕಂಡ ಧ್ಯೇಯಗಳನ್ನು ಹೊಂದಿರುತ್ತದೆ. • ಗುಣಾತ್ಮಕವಾದ ಶಿಕ್ಷಣ ನೀಡಿ ವೈಜ್ಞಾನಿಕ ಮನೋಧರ್ಮದ ಬೆಳವಣಿಗೆ; • ತಾತ್ವಿಕ ಜ್ಞಾನದ ಜೊತೆಗೆ ಅನ್ವಯಿಕ ಕೌಶಲ್ಯದ ಬೆಸುಗೆ; • ಗುಣಾತ್ಮಕ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಶಿಕ್ಷಣದ ಶ್ರೇಷ್ಠತೆ ಸಾಧನೆ; • ಸಮಾಜದ ಎಲ್ಲಾ ವರ್ಗಗಳಿಗೂ ಉನ್ನತ ಶಿಕ್ಷಣದ ಅವಕಾಶ; • ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳು ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವುದು; • ಸಾಮಾಜಿಕ ಸೂಕ್ಷ್ಮ ಪ್ರಜ್ಞೆ ಹೊಂದಿದ ಪ್ರಜೆಗಳನ್ನು ರೂಪಿಸುವುದು; • ಜ್ಞಾನ ಹಾಗೂ ಮೌಲ್ಯಭರಿತ ಸಮಾಜ ಸೃಷ್ಟಿಸಲು ಆದ್ಯತೆ; • ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರದ ನಿರ್ವಹಣೆ

-2

ಆ)	ಸದರಿ ವಿಶ್ವವಿದ್ಯಾಲಯಕ್ಕೆ ಬೇಕಾಗಿರುವ ಖಾಯಂ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು (ಮಾಹಿತಿ ನೀಡುವುದು)	ನೇರ ನೇಮಕಾತಿಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಆರ್ಥಿಕ ನಿರ್ಬಂಧಗಳು ಜಾರಿಯಲ್ಲಿರುತ್ತವೆ. ಈ ಆರ್ಥಿಕ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ಅಗತ್ಯ ಕ್ರಮವಹಿಸಲಾಗುವುದು.

ಸಂಖ್ಯೆ: ಇಡಿ/ 183 /ಯುಬಿವಿ /2022

(ಡಾ|| ಅಶ್ವತ್ ನಾರಾಯಣ ಸಿ.ಎನ್.)

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು.